25-10-2015

ಪ್ರಜಾವಾಣಿ

ಪ್ರಜಾವಾಣಿ ಭಾನುವಾರ • ಅಕ್ಟೋಬರ್ 25, 2015

### ಜಿಲ್ಲಾ ಪ್ಲಾಂಟರ್ಸ್ ಸಂಘದ ಸಭಾಂಗಣದಲ್ಲಿ ಬೆಳೆ ಹಾನಿ ಕುರಿತ ಸಂವಾದ: ಕಮ್ಮರಡಿ ಭಾಗಿ

# ನಿಖರ ಬೆಂಬಲ ಬೆಲೆ ನಿಗದಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಸಕಲೇಶಪುರ: ರೈತರು ಬೆವರು ಹರಿಸಿ ಬೆಳೆಯುವ ಬೆಳೆಗೆ ನ್ಯಾಯವಾಗಿ ಲಾಭದಾಯಕ ಬೆಲೆ ದೊರೆಯಬೇಕು. ಆ ನಿಟ್ಟಿನಲ್ಲಿ ಬೆಂಬಲ ಬೆಲೆ ನಿಗದಿಗೊಳಿಸಲು ಸರ್ಕಾರ ಶಾಸನ ರೂಪಿಸಬೇಕು ಎಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ ಒತ್ತಾಯಿಸಿದರು.

ಇಲ್ಲಿಯ ಜಿಲ್ಲಾ ಪ್ಲಾಂಟರ್ಸ್ ಸಂಘದ ಸಭಾಂಗಣದಲ್ಲಿ ಮಳೆಯಾಶ್ರಿತ ಭತ್ತದ ಬೇಸಾಯ ಹಾಗೂ ಬೆಳೆಹಾನಿ ಕುರಿತಂತೆ ಶನಿವಾರ ರೈತರು, ಅಧಿಕಾರಿಗಳು ಮತ್ತು ತಜ್ಞರೊಂದಿಗೆ ನಡೆದ ಸಂವಾದದಲ್ಲಿ ಮಾತನಾಡಿದರು.

ರೈತರು ಖರ್ಚು ಮಾಡಿದ ಬಂಡವಾಳದ ಶೇ 50ರ ಪ್ರಮಾಣದ ಲಾಭವಾದರೂ ದೊರೆಯಬೇಕು. ಆಗ ಮಾತ್ರ ರೈತರ ಅಸ್ತಿತ್ವ ಉಳಿಯಲು ಸಾಧ್ಯ ಎಂದರು.

ಮಾರುಕಟ್ಟೆಯಲ್ಲಿ ಗ್ರಾಹಕರು ಆಹಾರ ಪದಾರ್ಥಗಳನ್ನು ಖರೀದಿ ಮಾಡುವಾಗ ನೀಡುವ ಬೆಲೆಯ ಶೇ 20ರಷ್ಟೂ ರೈತರ ಕೈ ಸೇರುತ್ತಿಲ್ಲ. ಲಾಭವೆಲ್ಲ ಮಧ್ಯವರ್ತಿಗಳ ಪಾಲಾಗುತ್ತಿದೆ ಎಂದರು.

ಕೃಷಿ ಉತ್ಪನ್ನಗಳ ಮಾರಾಟದಲ್ಲಿ ಮಧ್ಯವರ್ತಿಗಳನ್ನು ದೂರಮಾಡುವ ಅಗತ್ಯವಿದೆ ಎಂದ ಅವರು, ಸಾವಯವ ಮಾದರಿಯಲ್ಲಿ ಗುಣಮಟ್ಟದ ಬೆಳೆ ಬೆಳೆದು ರೈತರೇ ಪ್ಯಾಕಿಂಗ್ ಮಾಡಿ ಲೇಬಲ್‌ಗಳನ್ನು ಅಂಟಿಸಿ ನೇರವಾಗಿ ಗ್ರಾಹಕರಿಗೆ ತಲುಪಿಸುವ ಕೆಲಸ ಆಗಬೇಕು. ಇದಕ್ಕೆ ನರೇಗಾ ಯೋಜನೆ ಬಳಕೆ ಮಾಡಿಕೊಳ್ಳಬಹುದು ಎಂದರು.

ಸರ್ಕಾರ ನಿಗದಿ ಮಾಡಿದ ಬೆಂಬಲ ಬೆಲೆಗಿಂತ ಕಡಿಮೆ ದರಕ್ಕೆ ರೈತರ ಉತ್ಪನ್ನಗಳನ್ನು ವ್ಯಾಪಾರ ಮಾಡುವುದು ಶಿಕ್ಷಾರ್ಹ ಅಪರಾಧ ಎಂದರು.

ಕಳೆದ 30 ವರ್ಷಗಳ ಹಿಂದೆ ಭತ್ತ, ಆಲೂಗಡ್ಡೆ ಹಾಗೂ ಹಣ್ಣು, ತರಕಾರಿ ಬೆಳೆಯುವ ಪ್ರಮಾಣ ಜಿಲ್ಲೆಯಲ್ಲಿ ಗಣನೀಯವಾಗಿ ಕಡಿಮೆಯಾಗುತ್ತಿದೆ. ರೈತರು ಇದೇ ರೀತಿ ಅಗತ್ಯ ಪದಾರ್ಥಗಳನ್ನು ಬೆಳೆಯಲು ಮನಸ್ಸು ಮಾಡದಿದ್ದರೆ ಮುಂದಿನ 10 ವರ್ಷಗಳಲ್ಲಿ ಭತ್ತ, ರಾಗಿ ಮೊದಲಾದ ಬೆಳೆಗಳು ಇಲ್ಲವಾಗಬಹುದು ಎಂದು ಕಳವಳ ವ್ಯಕ್ತಪಡಿಸಿದರು. ಇದೊಂದು ಗಂಭೀರ ಸಮಸ್ಯೆಯಾಗಿದ್ದು, ಸರ್ಕಾರ ಈ ನಿಟ್ಟಿನಲ್ಲಿ ಬೆಳೆ ಹಾಗೂ ರೈತರ ಅಸ್ತಿತ್ವ ಉಳಿಸುವ ನಿಟ್ಟಿನಲ್ಲಿ ನಿರ್ಧಾರ ತೆಗೆದುಕೊಳ್ಳಬೇಕು ಇದಕ್ಕೆ ಪೂರಕವಾದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದರು.

ರಾಜ್ಯ ಬೆಳೆಗಾರರ ಒಕ್ಕೂಟದ ಮಾಜಿ ಅಧ್ಯಕ್ಷ ಬಿ.ಎ. ಜಗನ್ನಾಥ್ ಮಾತನಾಡಿ, ರಾಜಕಾರಣಿಗಳು, ಸರ್ಕಾರ ರೈತರೇ ಈ ದೇಶದ ಬೆನ್ನೆಲುಬು ಎಂದು ಹೇಳಿಕೊಂಡೇ ಆಡಳಿತ ನಡೆಸುತ್ತಾ ಬಂದಿದ್ದಾರೆ ಎಂದರು.



ಸಕಲೇಶಪುರದಲ್ಲಿ ಶನಿವಾರ ಜಿಲ್ಲಾ ಪ್ಲಾಂಟರ್ಸ ಸಂಘದಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಮಾತನಾಡಿದರು

**ಬೇಡಿಕೆ:** ರಾಜ್ಯ ಹಾಗೂ ಕೇಂದ್ರ ಸರ್ಕಾರ ಕೃಷಿಗೆ ಪ್ರತ್ಯೇಕ ಬಜೆಟ್ ಮಂಡನೆ ಮಾಡಬೇಕು. ರೈತರು ಖರ್ಚು ಮಾಡಿದ ಬಂಡವಾಳಕ್ಕೆ ಶೇ 50 ಲಾಭ ದೊರೆಯುವಂತೆ ಬೆಲೆ ನಿಗದಿಗೊಳಿಸಬೇಕು. ಪ್ರದೇಶ ಹಾಗೂ ಆಯಾ ಬೆಳೆಗಳಿಗೆ ಅನುಗುಣವಾಗಿ ರೈತ ಅಥವಾ ಬೆಳೆಗಾರರೊಬ್ಬರನ್ನು ಕೃಷಿ ಬೆಲೆ ಆಯೋಗದ ಸದಸ್ಯರಾಗಿ ನೇಮಕ ಮಾಡಬೇಕು. ಬೆಲೆಯ ಬೇಡಿಕೆ ಪ್ರಮಾಣಕ್ಕೆ ಸಂಬಂಧಿಸಿದಂತೆ ಪ್ರತಿ ಮೂರು ತಿಂಗಳಿಗೊಮ್ಮೆ ಮಾಹಿತಿ ಪಡೆಯಬೇಕು ಎಂಬುದನ್ನು ಒಳಗೊಂಡಂತೆ ಒಟ್ಟು 12 ಬೇಡಿಕೆಗಳಿರುವ ಮನವಿ ಪತ್ರವನ್ನು ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ ಅವರಿಗೆ ನೀಡಲಾಯಿತು.

ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ ಕೆ.ಬಿ. ಕೃಷ್ಣಪ್ಪ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಎಚ್.ಟಿ. ಮೋಹನ್ ಕುಮಾರ್, ಗೌರವ ಕಾರ್ಯದರ್ಶಿ ಎಂ.ಎಚ್. ಪ್ರಕಾಶ್, ಅನೇಮಹಲ್ ಬಸಣ್ಣ ಇದ್ದರು.

> ರೈತರು ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ಇಲ್ಲ. ಹವಾಮಾನ ವೈಪರಿತ್ಯದಿಂದ ಬೆಳೆ ಹಾನಿ ಆಗುತ್ತಿದೆ. ಇಂತಹ ಸಮಸ್ಯೆಗಳಿಂದ ರೈತರ ಸರಣಿ ಆತ್ಮಹತ್ಯೆಗಳು ನಡೆಯುತ್ತಿವೆ
>
> **ಬಿ.ಎ. ಜಗನ್ನಾಥ್**
> ರಾಜ್ಯ ಬೆಳೆಗಾರರ ಒಕ್ಕೂಟದ ಮಾಜಿ ಅಧ್ಯಕ್ಷ

# ವಿಜಯ ಕರ್ನಾಟಕ

### ಮಳೆಯಾಶ್ರಿತ ಭತ್ತದ ಬೇಸಾಯ, ಬೆಳೆಹಾನಿ ಕುರಿತು ಸಂವಾದ

# ಬೆಂಬಲ ಬೆಲೆ ನಿಗದಿಗೆ ಶಾಸನ ಸ್ವರೂಪ ನೀಡಿ

**ವಿಕ ಸುದ್ದಿಲೋಕ,** ಸಕಲೇಶಪುರ

ರೈತರು ಬೆಳೆದ ಬೆಳೆಗೆ ಯೋಗ್ಯ ಬೆಲೆ ಪಡೆಯುವುದು ಅವರ ಹಕ್ಕಾಗಿದ್ದು, ಈ ನಿಟ್ಟಿನ ಬೆಂಬಲ ಬೆಲೆ ನಿಗದಿಗೆ ಸರಕಾರ ಶಾಸನ ಸ್ವರೂಪ ನೀಡಿ ನೆರವು ನೀಡುವಂತಾಗಬೇಕು ಎಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್.ಪ್ರಕಾಶ್ ಕಮ್ಮರಡಿ ಹೇಳಿದರು.

ಪಟ್ಟಣದ ಜಿಲ್ಲಾ ಪ್ಲಾಂಟರ್ಸ್ ಸಂಘ(ಎಚ್‌ಡಿಪಿಎ) ಸಭಾಂಗಣದಲ್ಲಿ ಮಳೆಯಾಶ್ರಿತ ಭತ್ತದ ಬೇಸಾಯ ಹಾಗೂ ಬೆಳೆಹಾನಿ ಕುರಿತಂತೆ ಶನಿವಾರ ರೈತರು, ಅಧಿಕಾರಿಗಳು ಹಾಗೂ ತಜ್ಞರೊಂದಿಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ರೈತರು ಹೂಡಿದ ಕೃಷಿ ಬಂಡವಾಳದ ಶೇ.50 ರಷ್ಟು ಲಾಭ ಪಡೆಯುವಂತಾದಾಗ ಮಾತ್ರ ಕೃಷಿಗೆ ಬೆಲೆ ಹಾಗೂ ಕೃಷಿಕನಿಗೆ ನೆಲೆ ಎಂದರು. ಆಹಾರ ಪದಾರ್ಥಗಳಿಗೆ ಗ್ರಾಹಕ ನೀಡುವ ಮೊತ್ತದ ಶೇ.20 ರಷ್ಟು ಹಣ ಮಾತ್ರ ರೈತರಿಗೆ ಸೇರುತ್ತಿದ್ದು, ಎಲ್ಲಾ ಲಾಭವೂ ದಲ್ಲಾಳಿಗಳು ಹಾಗೂ ಮಾರಾಟಗಾರರ ಜೇಬು ತುಂಬುತ್ತಿವೆ. ಈ ನಿಟ್ಟಿನಲ್ಲಿ ಬೆಳೆಗಾರರು ಚಿಂತಿಸಿ ತಾವು ಬೆಳೆ ಬೆಳೆಯಲು ಹೂಡಿದ ಬಂಡವಾಳದ ಪ್ರಮಾಣಕ್ಕಿಂತ ಕಡಿಮೆ ದರಕ್ಕೆ ಮಾರಾಟ ಮಾಡಲು ಮುಂದಾಗದೆ ಸಾವಯವ ಮಾದರಿಯಲ್ಲಿ ಉತ್ಕೃಷ್ಟ ದರ್ಜೆಯ ಬೆಳೆ ಬೆಳೆದು ತಾವೇ ಪ್ಯಾಕಿಂಗ್ ಮಾಡಿ ಲೇಬಲ್‌ಗಳನ್ನು ಅಂಟಿಸಿ ನೇರವಾಗಿ ಗ್ರಾಹಕರಿಗೆ ತಲುಪಿಸುವ ಕೆಲಸ ಮಾಡಿ ದಲ್ಲಾಳಿಗಳನ್ನು ದೂರವಿಡಬೇಕು. ಸದ್ಯ ತಲೆದೋರಿರುವ ಕಾರ್ಮಿಕರ ಕೊರತೆ ಸರಿದೂಗಿಸಲು ನರೇಗಾ ಯೋಜನೆ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

**ಶೀಘ್ರ ಹಣ ಪಾವತಿ:** ಸರಕಾರ ರೈತರಿಗೆ ಆದಾಯದ ಮೂಲ ಭದ್ರಪಡಿಸಬೇಕು. ರೈತರ ಪ್ರಾಥಮಿಕ ಉತ್ಪನ್ನಗಳಿಗೆ ಲಾಭ ದೊರೆಯದಿರಲು ಸಮಾಜದ ಜಿಗುಟುತನವೂ ಪ್ರಮುಖ ಕಾರಣವಾಗಿದೆ.

ವಿಕ ಚಿತ್ರಲೋಕ



ಸಕಲೇಶಪುರದ ಎಚ್‌ಡಿಪಿಎ ಸಭಾಂಗಣದಲ್ಲಿ ಗುರುವಾರ ಮಳೆಯಾಶ್ರಿತ ಭತ್ತದ ಬೇಸಾಯ ಹಾಗೂ ಬೆಳೆಹಾನಿ ಉರಿತಂತೆ ಸಂವಾದ ಕಾರ್ಯಕ್ರಮವನ್ನು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ. ಎನ್.ಪ್ರಕಾಶ್ ಕಮ್ಮರಡಿ ಉದ್ಘಾಟಿಸಿದರು.

## ಮನವಿ ಸಲ್ಲಿಕೆ

**ಮ**ಲೆನಾಡು ಭಾಗದ ನಷ್ಟದ ಕೃಷಿಯಿಂದ ಬಳಲಿರುವ ರೈತರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಒದಗಿಸಿಕೊಡುವ ಸಂಬಂಧ ಎಚ್‌ಡಿಪಿಎ ವತಿಯಿಂದ ಡಾ.ಪ್ರಕಾಶ್ ಕಮ್ಮರಡಿ ಅವರಿಗೆ ಮನವಿಪತ್ರ ಸಲ್ಲಿಸಲಾಯಿತು. ಪ್ರದೇಶ ಹಾಗೂ ಆಯಾ ಬೆಳೆಗಳಿಗೆ ಅನುಗುಣವಾಗಿ ರೈತ ಬೆಳೆಗಾರರೊಬ್ಬರನ್ನು ಕೃಷಿ ಬೆಲೆ ಆಯೋಗದ ಸದಸ್ಯರಾಗಿ ನೇಮಕ ಮಾಡಿಕೊಳ್ಳಬೇಕು. ರೈತರು ಹೂಡಿದ ಕೃಷಿ ಬಂಡವಾಳಳ ಶೆ.50 ರಷ್ಟು ಲಾಭ ಗಳಿಸುವಂತೆ ಬೆಲೆ ನಿಗದಿ ಮಾಡಬೇಕು. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕೃಷಿಗೆ ಪ್ರತ್ಯೇಕ ಮುಂಗಡ ಪತ್ರ ಮಂಡಿಸಬೇಕು. ಬೆಲೆಯ ಬೇಡಿಕೆ ಪ್ರಮಾಣಕ್ಕೆ ಸಂಬಂಧಿಸಿದಂತೆ ಪ್ರತಿ ಮೂರು ತಿಂಗಳಿಗೊಮ್ಮೆ ಮಾಹಿತಿ ಪಡೆಯಬೇಕು ಎಂಬುದನ್ನು ಒಳಗೊಂಡಂತೆ ಒಟ್ಟು 12 ಬೇಡಿಕೆಗಳಿರುವ ಮನವಿ ಪತ್ರವನ್ನು ನೀಡಲಾಯಿತು.

pIII

# ನೇರ ಮಾರಾಟ : ಸಂಕಷ್ಟದಿಂದ ರೈತರು ಪಾರಾಗಲು ಸಾಧ್ಯ

## ಮಳೆಯಾಶ್ರಿತ ಬೇಸಾಯ ಮತ್ತು ಕಾಡು ಪ್ರಾಣಿ ಹಾವಳಿ ಕುರಿತ ಸಂವಾದ

ಸಕಲೇಶಪುರ: ರೈತರು ಉತ್ಕೃಷ್ಟ ರೀತಿಯಲ್ಲಿ ಬೆಳೆ ಬೆಳೆದು ತಾವೇ ಮಾರುಕಟ್ಟೆಗೆ ನೇರವಾಗಿ ಮಾರಾಟ ಮಾಡಿದರೆ ಸಂಕಷ್ಟದಿಂದ ಪಾರಾಗಲು ಸಾಧ್ಯ ಎಂದು ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ರೈತರಿಗೆ ಸಲಹೆ ನೀಡಿದರು.

ಹಾಸನ ಜಿಲ್ಲಾ ಬೆಳೆಗಾರರ ಒಕ್ಕೂಟದ ವತಿಯಿಂದ ಪಟ್ಟಣದ ರಾಘವೇಂದ್ರ ನಗರ ಬಡಾವಣೆಯ ಬೆಳೆಗಾರ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ಮಳೆಯಾಶ್ರಿತ ಬೇಸಾಯ ಮತ್ತು ಕಾಡು ಪ್ರಾಣಿ ಹಾವಳಿ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೈತನ ಬೆಳೆಗೆ ಸೂಕ್ತ ಬೆಲೆ ಸಿಗಬೇಕೆಂದರೆ ತನ್ನದೇ ಆದ ಬ್ರಾಂಡನ್ನು ರೂಪಿಸಿ ಉತ್ಕೃಷ್ಟ ಬೆಳೆ ಬೆಳೆದು, ಮಾರುಕಟ್ಟೆಯಿಂದ ದಲ್ಲಾಳಿಗಳನ್ನು ದೂರವಿಟ್ಟು ನೇರವಾಗಿ ಮಾರುಕಟ್ಟೆಗೆ ಮಾರಾಟ ಮಾಡುವಂತಹ ವ್ಯವಸ್ಥೆಯಾಗಬೇಕು ಎಂದರು.

ಈ ನಿಟ್ಟಿನಲ್ಲಿ ಆಯಾ ಪ್ರದೇಶಗಳಿಗೆ ಭೇಟಿ ನೀಡಿ ಆಯಾ ಭಾಗದ ಬೆಳೆ ಮತ್ತು ಇಳುವರಿ, ಮಾರುಕಟ್ಟೆ ಹಾಗೂ ಉತ್ಪಾದನಾ



ವೆಚ್ಚದ ಕುರಿತು ಸರ್ಕಾರಕ್ಕೆ ಸಂಪೂರ್ಣ ವರದಿ ನೀಡಲಾಗುವುದು ಎಂದರು.

ಕೃಷಿಕ ತನ್ನ ಬೆಳೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಸಿಂಪಡಿಸುವ ಬದಲು ಸಾವಯುವ ಪದ್ಧತಿ ಅನುಸರಿಸಬೇಕೆಂದು ಅವರು ಮನವಿ ಮಾಡಿದರು.

ಕರ್ನಾಟಕ ಕಾಫಿ ಬೆಳೆಗಾರರ ಸಂಘದ ಮಾಜಿ ಅಧ್ಯಕ್ಷ ಬಿ.ಎ.ಜಗನ್ನಾಥ್ ಮಾತನಾಡಿ, ಮಲೆನಾಡು ಭಾಗದಲ್ಲಿ ಅತಿವೃಷ್ಟಿ, ಅನಾವೃಷ್ಟಿ ಹಾಗೂ ಕಾರ್ಮಿಕರ ಸಮಸ್ಯೆಯಿಂದಾಗಿ ಭತ್ತ ಬೆಳೆಯುವ ಪ್ರದೇಶಗಳೂ ಸಂಪೂರ್ಣವಾಗಿ ಖಾಲಿ ಬಿದ್ದಿವೆ. ಅಲ್ಪ ಸ್ವಲ್ಪ ಮಾಡಲು ಹೊರಟರೆ ಕಾಡು ಪ್ರಾಣಿಗಳ ಹಾವಳಿಯಿಂದ ಸಂಪೂರ್ಣ ನಷ್ಟ ಅನುಭವಿಸುವಂತಾಗಿದೆ. ವಿಚಾರವಾದಿಗಳ ಹತ್ಯೆಯನ್ನು ನಾವು ಖಂಡಿಸುತ್ತಿದ್ದೇವೆ. ಈ ಹೆಸರಲ್ಲಿ ತಮಗೆ ದೊರಕಿದ ಪ್ರಶಸ್ತಿಗಳನ್ನು ಹಿಂತಿರುಗಿಸಿದ ಯಾವ ಸಾಹಿತಿಗಳಾಗಲೀ ಚಿಂತಕರಾಗಲೀ ರೈತ ಸಮುದಾಯದ ಆತ್ಮಹತ್ಯೆ ಖಂಡಿಸಿಲ್ಲ ಎನ್ನುವುದು ವಿಷಾದನೀಯ ಎಂದರು.

ರೈತ ತನ್ನ ದುಶ್ಚಟಗಳಿಂದ ಆತ್ಮಹತ್ಯೆ ಹಾದಿ ಹಿಡಿದಿದ್ದಾನೆ ಎಂಬ ಬಾಲಿಶ ಹೇಳಿಕೆ ನೀಡುತ್ತಿರುವುದು ವಿಷಾದನೀಯ. ಕಾಫಿ ಬೆಳೆಯ ಮಾರುಕಟ್ಟೆ ಬೆಲೆ ಅಂತರರಾಷ್ಟ್ರೀಯ ಮಟ್ಟದಲ್ಲಿ ನಿಗದಿಯಾಗುತ್ತಿದ್ದರೂ ಕಾರ್ಮಿಕರ ಸಮಸ್ಯೆ, ಕಾಡು ಪ್ರಾಣಿ ಸಮಸ್ಯೆ ಪರಿಹಾರಕ್ಕೆ ಸರ್ಕಾರದ ಮಟ್ಟದಲ್ಲಿ ಪರಿಹಾರ ಕ್ರಮ ಕೈಗೊಂಡಿಲ್ಲ ಎಂದರು.

ಬೆಳೆಗಾರರ ಸಂಘದ ಅಧ್ಯಕ್ಷ ಕೆ.ಬಿ.ಕೃಷ್ಣಪ್ಪ, ಕಾರ್ಯದರ್ಶಿ ಪ್ರಕಾಶ್, ಕಾಫಿ ಮಂಡಳಿ ಮಾಜಿ ಸದಸ್ಯ ಎಚ್.ಕೆ.ಬಸವಣ್ಣ, ಕೆಜಿಎಫ್ ಉಪಾಧ್ಯಕ್ಷ ಎಚ್.ಟಿ.ಕುಮಾರ್ ಉಪಸ್ಥಿತರಿದ್ದರು. ಮಲೆನಾಡು ಭಾಗದ ಬೆಳೆಗಾರರು ಹಾಗೂ ರೈತರ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಹಲವರು ಪ್ರಸ್ತಾಪ ಮಾಡಿದರು.

(-4ನೇ ಪುಟಕ್ಕೆ)